**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ್.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC**-1312/2021

**ದಿನಾಂಕ** 25-06-2024 **ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಸಂಗಮೇಶ | RW1 |
| ತಂದೆಯ ಹೆಸರು | ಃ | ಚಂದ್ರಶೇಖರಯ್ಯ ಸ್ಥಾವರಮಠ | |
| ವಯಸ್ಸು | ಃ | 38 ವರ್ಷ | |
| ಉದ್ಯೋಗ | ಃ | ಲೀಗಲ್ ಆಫಿಸರ್, TATA AIG General Insurance Company Ltd. | |
| ವಾಸಸ್ಥಳ | ಃ | ಕಲ್ಬುರ್ಗಿ | |

**ಮುಖ್ಯ ವಿಚಾರಣೆಃ ಶ್ರೀ VCMP 2 ನೇ ಎದುರುದಾರರ ಪರ ವಕೀಲರಿಂದಃ**

ಮುಖ್ಯ ವಿಚಾರಣೆ ಬದಲಾಗಿ ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

ನಮ್ಮ ಕಂಪನಿ ವತಿಯಿಂದ ಲಾರಿ ನಂ.MP-06 HC-1382 ವಾಹನಕ್ಕೆ ನೀಡಲಾದ ವಿಮೆ ಪಾಲಿಸಿ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆ ಆರ್-1 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಶ್ರೀ SAK ಅರ್ಜಿದಾರರ ಪರ ವಕೀಲರಿಂದ**

ಲಾರಿ ವಾಹನ ನಂ.MP-06 HC-1382 ರ ವಾಹನಕ್ಕೆ ನಮ್ಮ ಕಂಪನಿಯಿಂದ ನೀಡಲಾದ ವಿಮೆಯು ಅಪಘಾತದ ದಿನದಂದು ಚಾಲ್ತಿಯಲ್ಲಿತ್ತು. ಅದೇ ರೀತಿ ಲಾರಿ ಚಾಲಕನ ವಾಹನ ಚಾಲನಾ ಪರವಾನಿಗೆ ಕೂಡ ಅಪಘಾತದ ದಿನದಂದು ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ. ಅಪಘಾತದ ದಿನದಂದು ವಾಹನ ಚಾಲನ ಪರವಾನಿಗೆ ಚಾಲ್ತಿಯಲ್ಲಿರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದಾಗಿರುತ್ತದೆ ಎಂದು ಪೊಲೀಸರು ಲಾರಿ ಚಾಲಕನ ಮೇಲೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ.

ಲಾರಿ ಚಾಲಕನ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆಂದು ಹೇಳಿ ಸದರಿ ದೋಷಾರೋಪಣೆ ಪಟ್ಟಿಯನ್ನು ನಾವು ಪ್ರಶ್ನಿಸಿಲ್ಲ. ಸಾಕ್ಷಿ ಮುಂದುವರೆದು ದೋಷಾರೋಪಣೆ ಪಟ್ಟಿಯಲ್ಲಿ ನಾವು ಪಕ್ಷಗಾರರಾಗಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾರಣ ಹಾಗೂ ಆತನ ಮನೆಯವರು ಅನಕ್ಷರಸ್ಥರಾಗಿದ್ದ ಕಾರಣ ದೂರು ಸಲ್ಲಿಸಲು 9 ದಿನ ವಿಳಂಬವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ದಿನದಂದೇ ಕುರಾಳ ಆಸ್ಪತ್ರೆಯವರು MLC ದಾಖಲಿಸಿರುತ್ತಾರೆಂದರೆ ಸರಿಯಲ್ಲ. ಪರಿಹಾರ ಧನ ಕೊಡುವ ನಮ್ಮ ಕಂಪನಿಯ ಹೊಣೆಗಾರಿಕೆಯಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು ಮತ್ತು

**ಎಮ್.ಎ.ಸಿ.ಟಿ XV**, ಜೇವರ್ಗಿ